ಕಥೆ




## ಜಿ.ವಿ. ಆನಂದಮೂರ್ತಿ

ಕಲೆ: ವಿಶ್ವನಾಥ್ ಎ.ಎಸ್.


# ಉರಿಬಿಸಿಲಿಗೊಂದು ನೆರಳು

**'ತೊರೆದ ಗಂಡ ಬರಲಿಲ್ಲ ಮನೆಗೆ, ಓ! ಬಂದೆಯಲ್ಲ ಮಗುವೆ!'**

**–ಕೆ.ಎಸ್. ನರಸಿಂಹಸ್ವಾಮಿ**

ಶಾಲಾ ಶಿಕ್ಷಕರಾಗಿದ್ದ ನಮ್ಮ ತಂದೆಗೆ ಈ ಊರಿಗೆ ವರ್ಗಾವಣೆಯಾಯಿತು. ಇದೊಂದು ಅಂಗೈ ಅಗಲದ ಊರು. ಎಲ್ಲರೂ ಇದನ್ನು ತಾಲೂಕು ಕೇಂದ್ರ ಎಂದು ಕರೆಯುತ್ತಿದ್ದರು. ನಾನಾಗ 7ನೇ ತರಗತಿ ಓದುತ್ತಿದ್ದೆ. ನಮ್ಮ ಕುಟುಂಬ ಈ ಊರಿಗೆ ಬಂದಾಗ ಮುಂಗಾರು ಮಳೆಯ ದಿನಗಳು ಇನ್ನೂ ಭೂಮಿಯ ಮೇಲೆ ಕಾಲೂರಿರಲಿಲ್ಲ. ರಾಯದುರ್ಗ ರಸ್ತೆಯ ಒಂದು ತುದಿಯಲ್ಲಿ ನಮ್ಮ ಬಾಡಿಗೆ ಮನೆಯಿತ್ತು. ನಮ್ಮ ಮನೆ ಊರಿನ ಕೆರೆಗೆ ಬಹು ಸಮೀಪವಿತ್ತು. ನಮ್ಮ ಮನೆಯ ಅಂಗಳದಲ್ಲಿ ಮೂರು-ನಾಲ್ಕು ಫಲ ಕೊಡುತ್ತಿದ್ದ ತೆಂಗಿನ ಮರಗಳಿದ್ದವು. ಸಂಜೆಯ ಹೊತ್ತು ಕೆರೆಯ ಮೇಲಿನ ಹಿತವಾದ ಗಾಳಿಗೆ ನಮ್ಮ ಮನೆಯವರೆಲ್ಲ ತೆಳುವಾಗಿ ಮೈವೊಡ್ಡಿ ಮನೆಯ ಮುಂಭಾಗದ ಜಗುಲಿಯ ಮೇಲೆ ಕುಳಿತುಕೊಳ್ಳುತ್ತಿದ್ದೆವು. ರಾತ್ರಿ ಹೊತ್ತು ಒಂದಾದ ಮೇಲೊಂದರಂತೆ ದಡಕ್ಕೆ ತಾಕುತ್ತಿದ್ದ ಕೆರೆಯ ನೀರಿನ ಅಲೆಗಳ ಸಂಗೀತದಂತಹ ಶಬ್ದ ನನಗೆ ಕೇಳಿಸುತ್ತಿತ್ತು. ಅನೇಕ ಸಲ ನಾನು ಪುಸ್ತಕ ಮುಚ್ಚಿಟ್ಟು ಗೋಡೆಗೆ ಒರಗಿಕೊಂಡು ಈ ಶಬ್ದವನ್ನು ಮೈಮರೆತು ಕೇಳುತ್ತಿದ್ದೆ.

ನಮ್ಮ ಮನೆಯ ಮುಂಭಾಗದಲ್ಲಿದ್ದ ತೆಂಗಿನಮರಗಳು ಬಹು ಎತ್ತರವಾಗಿದ್ದರಿಂದ, ಕಾಯಿಗಳನ್ನು ಕೀಳಲು ನಮಗೆ ಆಗುತ್ತಿರಲಿಲ್ಲ! ಒಂದು ಸಲ ನಮ್ಮ ತಂದೆಯವರಿಗೆ ಪರಿಚಯವಿದ್ದವರು ಒಬ್ಬ ವ್ಯಕ್ತಿಯನ್ನು ಜೊತೆಯಲ್ಲಿ ಕರೆದುಕೊಂಡು ಬಂದು 'ಈತ, ಕಾಯಿ ಕೀಳೋದರಲ್ಲಿ ರುಸ್ತುಮ್ಮ. ಎಂಥದ್ದೇ ದೊಡ್ಡಮರವಿದ್ದರೂ ನಿರಾಯಾಸವಾಗಿ ಹತ್ತಿ ಗೊನೆಗಳನ್ನು ಹಲ್ಲಿನಿಂದಲೇ ಕಚ್ಚಿಕೊಂಡು ಬಂದುಬಿಡುತ್ತಾನೆ' ಎಂದು ನಮ್ಮ ತಂದೆಯವರಿಗೆ ಅವನನ್ನು ಪರಿಚಯಿಸಿದರು.

ಆ ವ್ಯಕ್ತಿಗೆ ನಡುವಯಸ್ಸು ದಾಟಿದ್ದರೂ ನೋಡಲು ಅಷ್ಟೇನೂ ದೃಢಕಾಯನಾಗಿರಲಿಲ್ಲ. ಆದರೂ ಅವರ ವ್ಯಕ್ತಿತ್ವಕ್ಕೆ ಒಪ್ಪುವಂತಹ ಒಂದು ನಿಲುವಿತ್ತು. ಒಂದು ಮುಂಡು, ಮಾಸಿದ ಅಂಗಿ, ಹೆಗಲ ಮೇಲೊಂದು ಕೊಳೆಯಾದ ವಲ್ಲಿ, ಅಲ್ಲಲ್ಲಿ ನೆರೆತು ಒಪ್ಪವಾಗಿದ್ದ ಕೂದಲನ್ನು ಹೆಣ್ಣುಮಕ್ಕಳಂತೆ ಗಂಟುಕಟ್ಟಿದ್ದರು. ಕಿವಿಯಲ್ಲಿ ಬೆಳ್ಳಿಯ ಒಂಟಿ. ಮುಂಗೈಯಲ್ಲೊಂದು ಕಡಗ ಹಾಗೂ ತುದಿ ಚೂಪಾಗಿ ಹುರಿಗಟ್ಟಿದ್ದ ಮೀಸೆ. ನೋಡಿದರೆ ಯಾವುದೋ ಪಾಳೆಪಟ್ಟನ್ನು ಆಳಿದ ಮಾಜಿ ಪಾಳೆಗಾರ ನಾಯಕನಂತೆ ಕಂಡುಬರುತ್ತಿದ್ದರು. ನನಗಂತೂ ಅವರ ವ್ಯಕ್ತಿತ್ವವೇ ಆಕರ್ಷಕವೆನಿಸಿತು.

'ನಿಮ್ಮ ಹೆಸರೇನು?' ಎಂದು ನನ್ನ ತಂದೆಯವರು ಕೇಳಿದರು.

'ದೊಡ್ಡಹನುಮ'

'ಇರುವುದು ಎಲ್ಲಿ?'

'ಇಲ್ಲೇ ಕರೆಬಯಲು ಪಕ್ಕ ಗೋಮಾಳ ಐತೆ. ಅಲ್ಲಿ